ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

# ಶಾಸನಸಭೆ ಶಿಷ್ಟಾಚಾರ ಪರಿಷ್ಕರಣೆಗೆ ಸಮಿತಿ

**ಸಂ.ಕ.ಸಮಾಚಾರ, ಬೆಂಗಳೂರು**

ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳನ್ನು ಪರಿಶೀಲಿಸಿ ತಿದ್ದುಪಡಿ ತರಲು ಶಿಫಾರಸು ಮಾಡಲು ನಿಯಮಾವಳಿ ಸಮಿತಿ ರಚಿಸಲು ನಿರ್ಧರಿಸಲಾಗಿದೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭೆಯ ಕಾರ್ಯಕಲಾಪದ ನಡವಳಿಕೆಯಲ್ಲಿ ಕೆಲ ಲೋಪದೋಷಗಳಿವೆ. ಅವುಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಸಾರ್ವಜನಿಕರ ಅಭಿಪ್ರಾಯ ಪಡೆಯಲಾಗುತ್ತದೆ. ಈ ಸಂಬಂಧ ಸಮಿತಿ ರಚಿಸಿ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳನ್ನು ಪರಿಶೀಲಿಸಿ ತಿದ್ದುಪಡಿ ಮಾಡಲಾಗುವುದು ಎಂದರು.

**ಅಧಿವೇಶನ ಯಶಸ್ವಿ:** 6 ದಿನಗಳ ಅಧಿವೇಶನದಲ್ಲಿ ಒಟ್ಟು 36 ವಿಧೇಯಕಕ್ಕೆ ಅಂಗೀಕಾರ ಪಡೆಯಲಾಗಿದೆ. ಸದನ ಶೇ.90ಕ್ಕೂ ಹೆಚ್ಚು ಕಾರ್ಯಕಲಾಪಗಳನ್ನು ಪೂರ್ಣಗೊಳಿಸಿದ್ದು ಯಶಸ್ವಿಯಾಗಿದೆ ಎಂದು ಸಭಾಧ್ಯಕ್ಷರು ತಿಳಿಸಿದರು.

ಒಟ್ಟು 40 ಗಂಟೆ ಕಲಾಪ ನಡೆದಿದೆ. 3071 ಪ್ರಶ್ನೆ ಸ್ವೀಕರಿದ್ದು 1109 ಪ್ರಶ್ನೆಗೆ ಉತ್ತರಗಳನ್ನು ಮಂಡಿಸಲಾಗಿದೆ. ನಿಯಮ 351ರಡಿ 60 ಸೂಚನೆಗಳನ್ನು ಅಂಗೀಕರಿಸಲಾಗಿದೆ. ಅದರಲ್ಲಿ 35ಕ್ಕೆ ಉತ್ತರ ಸ್ವೀಕರಿಸಲಾಗಿದೆ ಎಂದರು.

**ವರದಿಗಳ ಮಂಡನೆ:** ವಿಧಾನಮಂಡಲದ 6 ಜಂಟಿ ಪರಿಶೀಲನಾ ಸಮಿತಿ ವಿಶೇಷ ವರದಿ, 57 ಅಧಿಸೂಚನೆಗಳು, 19 ಅಧ್ಯಾದೇಶಗಳು, 62 ವಾರ್ಷಿಕ ವರದಿ, 69 ಲೆಕ್ಕಪರಿಶೋಧನಾ ವರದಿ, ಅನುಷ್ಠಾನ 1 ವರದಿ,1 ಅನುಪಾಲನಾ ವರದಿ, 3 ವಿಶೇಷ ವರದಿ ಮಂಡಿಸಲಾಗಿದೆ ಎಂದೂ ಹೇಳಿದರು.

**28 ಮಂದಿ ಗೈರು:** ಕೋವಿಡ್‌ನಿಂದ ಸಚಿವರು, ಶಾಸಕರು ಸೇರಿ 28 ಮಂದಿ ಸದನಕ್ಕೆ ಗೈರಾಗಿದ್ದಾರೆ. ಆ ಪೈಕಿ ಬಿಜೆಪಿಯ–12, ಕಾಂಗ್ರೆಸ್–10, ಜೆಡಿಎಸ್–6 ಸದಸ್ಯರಿಗೆ ಕೋವಿಡ್ ಬಂದ ಹಿನ್ನೆಲೆ ಗೈರಾಗಿದ್ದರು.